ಶ್ರೀ ಎಂ.ಸಿ. ಬಸಪ್ಪ.—ಅಂತಿಮವಾಗಿ ಪ್ಲಾನಿಂಗ್ ಇಲಾಖೆಯವರು ಒಪ್ಪಿದ ಪಟ್ಟಿಯನ್ನೇ ತಾವು ಒಪ್ಪಿಕೊಳ್ಳುತ್ತೀರೋ ಅಥವಾ ತಮ್ಮ ಇಲಾಖೆಯವರು ಆದನ್ನು ಬದಲಾವಣೆ ಮಾಡುವ ಹಕ್ಕನ್ನು ಇಟ್ಟಿಕೊಂಡಿದ್ದೀರೋ?

ಶ್ರೀ ಕೆ. ಪ್ರಭಾಕರ್.—ಇಬ್ಬರೂ ಒಪ್ಪಿ ಅಂತಿಮವಾಗಿ ತೀರ್ಮಾನ ಮಾಡುತ್ತೇವೆ.

ಶ್ರೀ ಎಂ.ಸಿ. ಬಸಪ್ಪ.—೧೯೭೮-೭೯ರಲ್ಲಿ ಈ ಎರಡೂ ಇಲಾಖೆಗಳ ಜಿಜ್ಞಾಸೆಯಿಂದಾಗಿ ಎಷ್ಟು ಕೆಲಸಗಳು ನಿಂತುಹೋಗಿದ್ದವು, ಅವುಗಳನ್ನು ಯಾವಾಗ ಮಂಜೂರು ಮಾಡುತ್ತೀರಿ ಮತ್ತು ಯಾವಾಗ ಪೂರೈಸುತ್ತೀರಿ?

ಶ್ರೀ ಕೆ. ಪ್ರಭಾಕರ್.—ಈಗ ೧೭೨ ಕಾಮಗಾರಿಗಳ ಪೈಕಿ ೮೩ನ್ನು ಮೊದಲನೆಯ ಕಂತಾಗಿ ತೆಗೆದು ಕೊಳ್ಳಿ ಎಂದು ಹೇಳಿದ್ದಾರೆ. ಈ ಬಗ್ಗೆ ಆರ್ಥಿಕ ಇಲಾಖೆಗೆ ಬರೆದು ಕೆಲಸ ಮಾಡುವುದಕ್ಕೆ ಪ್ರಾರಂಭ ಮಾಡುತ್ತೇವೆ. ಇನ್ನುಳಿದ ಕಾಮಗಾರಿಗಳನ್ನು ತೆಗೆದುಕೊಳ್ಳುವ ಬಗೆ ಮತ್ತೊಮ್ಮೆ ನೋಡಿ ತಿಳಿಸಭ ತ್ತೇವೆಂದು ಅವರು ನಮಗೆ ಹೇಳಿದ್ದಾರೆ. ನಾವು ಆಗಲೀ ಎಂದು ಹೇಳಿದ್ದೇವೆ.

ಶ್ರೀ ಎಂ.ಸಿ. ಬಸಪ್ಪ.—ಈಗ ಈ ಎರಡೂ ಇಲಾಖೆಯವರು ಒಪ್ಪಿರುವ ಕೆಲಸವನ್ನು ಯಾವಾಗ ಮಾಡಿ ಮುಗಿಸುತ್ತೀರಿ? ಇನ್ನೂ ಎರಡೂ ಮೂರು ವರ್ಷಗಳು ಬೇಕಾಗುತ್ತದೆಯೇ ಹೇಗೆ? ಕುಡಿ ಯುವ ನೀರಿನ ಅಭಾವವಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ?

ಶ್ರೀ ಕೆ. ಪ್ರಭಾಕರ್.—೨-೩ ವರ್ಷಗಳ ಕಾಲ ಬೇಕಾಗುವುದಿಲ್ಲ. ಆಷ್ಟೊಂದು ಕಾಲದವರೆಗೆ ನಿಧಾನ ಮಾಡುವುದು ನಮ್ಮ ಇಚ್ಛೆಯು ಅಲ್ಲ. ಈ ಬಗ್ಗೆ ಒಂದು ಫೈನಲಿ ಲಿಸ್ಟ್ ಮಾಡಿ ಜಾಗ್ರತೆ ಮಾಡಿ ಮುಗಿಸುತ್ತೇವೆ.

ಶ್ರೀ ಎಂ.ಎಂ. ನಾಡಫ್.—ಈ ನೀರು ಸರಬರಾಜು ಯೋಜನೆಯಲ್ಲಿ ಎಷ್ಟು ಹಳ್ಳಿಗಳನ್ನು ಸೇರಿಸ ಬೇಕೆಂಬ ಬಗ್ಗೆ ಒಂದು ಪ್ಲಾನಿಂಗ್ ಏನಾದರೂ ಇದೆಯೇ?

ಶ್ರೀ ಕೆ. ಪ್ರಭಾಕರ್.—ಪ್ಲಾನಿಂಗ್ ಇದೆ. ಆದರೆ ಇಲ್ಲಿ ಪ್ಲಾನಿಂಗ್ ಇಲಾಖೆಯ ಪ್ಲಾನ್ ಬೇರೆ, ಜನರಲ್ ಆಗಿ ಇರುವ ಪ್ಲಾನ್ ಬೇರೆ.

Well-less villages in Chitradurga and Davangere Taluks.

813. SRI T. CHOWDAIAH (Bharmasagar)—Will the Minister for Rural Development and Panchayati Raj be pleased to state.—

(a) the number of villages in which there are no drinking water wells in the following hoblies of Chitradurga and Davangere Taluk, Village-wise.

Chitradurga Taluk

1. Bharamasagara Hobli
2. Hireguntanur Hobli
3. Kasaba Hobli

Davangere Taluk

1. Aneyodu Hobli
2. Kasaba Hobli

(b) whether Government intends to take immediate action to provide drinking water facilities to such of those villages where there are no drinking water facilities.

SRI K.PRABHAKAR (Minister for Rural Development and Panchayatiraj).—

(a) The number of well-less villages in each Hobli of Chitradurga Taluk are as follows.—

1, 2 villages

2. 3 villages

3. 14 villages

Davangere Taluk

1. Nil

2. Nil

(b) Yes.

ಶ್ರೀ ಟಿ. ಚೌಡಯ್ಯ;—ಇಲ್ಲಿ ಗ್ರಾಮಗಳ ಸಂಖ್ಯೆಯನ್ನು ಮಾತ್ರ ಕೊಡಲಾಗಿದೆ, ಗ್ರಾಮಗಳ ಹೆಸರುಗಳನ್ನು ಸಹ ಹೇಳುತ್ತಿರಾ?

†ಶ್ರೀ ಕೆ. ಪ್ರಭಾಕರ್.—ಈಗ ಆ ಇನ್‌ಫರ್‌ಮೇಷನ್ ಇಲ್ಲ.

ಶ್ರೀ ಟಿ. ಚೌಡಯ್ಯ.—ಇಲ್ಲಿ ದಾವಣಗೆರೆ ತಾಲ್ಲೂಕಿನಲ್ಲಿ ಒಂದೂ ಇಲ್ಲ ಎಂದು ಹೇಳಿರುವುದು ಸರಿಯಲ್ಲ. ಏಕೆಂದರೆ ನನ್ನ ಹತ್ತಿರವಿರುವ ಮಾಹಿತಿ ಪ್ರಕಾರ ಚಿತ್ರದುರ್ಗ ತಾಲ್ಲೂಕಿನ ಭರಮಸಾಗರ ಹೋಬಳಿಯಲ್ಲಿ ಎಮ್ಮೆಹಟ್ಟಿ, ಚೀಳಂಗಿ, ಬೀರಾವರ, ದೊಡ್ಡಲಗಟ್ಟ ಹಾಗೂ ದಾವಣಗೆರೆ ತಾಲ್ಲೂಕಿನ ಆನಗೋಡು ಹೋಬಳಿಗೆ ಸೇರಿದಂತೆ ಮಂಡಲೂರು, ಬಾವಿಹಾಳ, ಹೆಬ್ಬಾಳ್, ಗಂಗನಕಟ್ಟೆ, ಪಿಚ್ಚರಹಟ್ಟಿ ರೆಕೆಯಂಗಳಹಟ್ಟಿ, ದ್ಯಾಮವ್ವನಹಳ್ಳಿ ಕ್ಯಾಸ್, ಇಲ್ಲೆಲ್ಲಾ ಕುಡಿಯುವ ನೀರಿನ ಸೌಲಭ್ಯವಿಲ್ಲ; ಆದರೆ ತಾವು ಎಲ್ಲ ಗ್ರಾಮಗಳಲ್ಲಿಯೂ ನೀರಿನ ಸೌಲಭ್ಯವಿದೆ ಎಂದು ಇಲ್ಲಿ ಹೇಳಿದ್ದೀರಿ. ಜೊತೆಗೆ ಹಿರೆಗುಂಟನೂರು ಹೋಬಳಿ ಹಾಗೂ ಒಡ್ಡರಸಿದ್ದವ್ವನ ಹಳ್ಳಿರುವ ಬಾವಿಗಳು ಹಾಗೂ ಹರಿಜನರ ಕೇರಿಯಲ್ಲಿರುವ ಬಾವಿ ದುರಸ್ತಿಯಾಗ ಬೇಕಾಗಿದೆ. ಆದಕಾರಣ ಇದೆಲ್ಲವನ್ನೂ ಮತ್ತೊಮ್ಮೆ ಪರಿಶೀಲನೆ ಮಾಡಿ ನೋಡುತ್ತೀರಾ.

ಶ್ರೀ ಕೆ. ಪ್ರಭಾಕರ್.—ಪರಿಶೀಲನೆ ಮಾಡುತ್ತೇನೆ.

ಶ್ರೀ ಟಿ. ಚೌಡಯ್ಯ.—ನನ್ನ ಕೊನೆಯ ಪ್ರಶ್ನೆಗೆ ಉತ್ತರವಾಗಿ, ಹೌದು ಎಂದು ಹೇಳಿದ್ದೀರಿ. ಅಂದರೆ ಇಲ್ಲಿಯವರೆಗೆ ಏನೇನು ಕ್ರಮಗಳನ್ನು ಕೈಕೊಳ್ಳಲಾಗಿದೆ ಎಂಬುದನ್ನು ಹೇಳುತ್ತೀರಾ?

ಶ್ರೀ ಕೆ. ಪ್ರಭಾಕರ್.—ಸೇದುವ ಬಾವಿ ಕೈ ಪಂಪಿನ ಬಾವಿ ಹಾಗೂ ಕೊಳವೆ ಬಾವಿ ಈ ಮೂರು ವಿಧವಾದ ಬಾವಿಗಳ ಪೈಕಿ ಯಾವ ರೀತಿಯ ಬಾವಿಯನ್ನು ಎಲ್ಲೆಲ್ಲಿ ತೆಗೆಸಿದರೆ ಅನುಕೂಲವಾಗುತ್ತದೆಂಬುದನ್ನು ತಿಳಿದುಕೊಂಡು, ಅದರಂತೆ ಬಾವಿಗಳನ್ನು ತೆಗೆಸಲಾಗುತ್ತಿದೆ. ಇದು ಮಾನ್ಯ ಸದಸ್ಯರಿಗೂ ಗೊತ್ತಿದೆ.

ಶ್ರೀ ಟಿ.ಚೌಡರೆಡ್ಡಿ.—ಸರ್ಕಾರದ ಗಮನಕ್ಕೆ ಒಂದು ಮುಖ್ಯವಾದ ವಿಚಾರವನ್ನು ತರಬೇಕಾಗಿದೆ. ಏನೆಂದರೆ, ನಮ್ಮ ಭಾಗದಲ್ಲಿ ಹರಿಜನ ಹಾಗೂ ಗಿರಿಜನರು ವಾಸ ಮಾಡುತ್ತಿರುವ ಕಡೆಗಳಲ್ಲಿ ನೀರಿನ ಸೌಕರ್ಯ ಇಲ್ಲ. ಈ ಜನರು ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೇಸ್ಸಿಗೆ ಓಟು ಕೊಟ್ಟರೆಂಬ ಸೇಡಿನ ಮನೋಭಾವವನ್ನು ಗ್ರಾಮಗಳ ಮುಖಂಡರು ಇಟ್ಟು ಕೊಂಡು ಈ ಜನರಿಗೆ ಕುಡಿಯಲು ನೀರನ್ನು ಕೊಡದೆ ತೊಂದರೆ ಮಾಡುತ್ತಿದ್ದಾರೆ. ಇದರ ಜೊತೆಗೆ ಹಳ್ಳಿಗಳಲ್ಲಿ ಅಸ್ಪೃಶ್ಯತೆಯನ್ನು ಆಚರಿಸುವುದು ಹೆಚ್ಚಿಗೆ ನಡೆಯುತ್ತಿದೆ.

ಅಧ್ಯಕ್ಷರು.—ತಾವು ನೇರವಾಗಿ ಪ್ರಶ್ನೆ ಕೇಳಬೇಕು.

ಶ್ರೀ ಟಿ. ಚೌಡರೆಡ್ಡಿ.—ಈ ಹರಿಜನ ಹಾಗೂ ಗಿರಿಜನರಿಗೆ ಕೂಡಲೇ ನೀರಿನ ಸೌಕರ್ಯವನ್ನು ಒದಗಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಪ್ರಭಾಕರ್.—ಯಾವುದೇ ಕಾರಣದಿಂದ ಹರಿಜನರು ಸಾರ್ವಜನಿಕರ ಬಾವಿಗಳಲ್ಲಿ ನೀರು ತೆಗೆದುಕೊಳ್ಳುವುದಕ್ಕೆ ಅಡಚಣೆ ಇರುವುದು ಸರ್ಕಾರದ ಗಮನಕ್ಕೆ ಬಂದರೆ, ಕೂಡಲೇ ಕ್ರಮ ಕೈಕೊಳ್ಳುವ ಪದ್ಧತಿ ಈಗಿನ ಕಾನೂನಿನ ಪ್ರಕಾರ ಇದೆ. ತಾವು ಹೇಳುವುದು ನಿಜವಾಗಿದ್ದರೆ, ನೀರು ತೆಗೆದುಕೊಳ್ಳಲು ಕೆಲವರು ಅಡ್ಡಿ ಮಾಡುತ್ತಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದರೆ ಅಂತಹವರ ವಿರುದ್ಧ ಸೂಕ್ತ ಕ್ರಮ ಕೈಕೊಳ್ಳುತ್ತೇವೆ.

MR. SPEAKER.—Now Question No. 302 held over on 20th March 1979 may be put.

High Court Judges, District Judges, Civil Judges Munsiffs and staff in Judicial Departments.

302 SRI C.M. ARMUGHAM (K.G.F.)—Will the Minister for Law, Social Welfare and Backward Clases be pleased to state :—

(a) the number of High Court Judges, District Judges, Civil Judges and Munsiffs in the Judicial Department ;

(b) the number of Class I, Class II, Class III and Class IV officials in the Judicial Department other than Judges ;

(c) the number of S.C./S.T.s and muslims among them ?

SRI L. G. HAVANUR (Minister for Law, Social Welfare and Backward Classes)—

(a)	High Court Judges	...	23

The number of regular posts including OOD, sanctioned in each catogory of Class-I posts are as follows :

(a)	District Judges	...	58
(b)	Civil Judges and Chief Judicial Magistrates	...	87
(c)	Munsiffs	...	208
			*353

*There are 331 Officers working at present in various Class I posts against 353 posts in the Judicial Department.

(b)	Class I	...	Nil
	Class II	...	19
	Class III	...	4,318
	Class IV	...	2,401